**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ನಂಃ 75/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | - ರಾಮಪ್ಪ ಹೆಚ್ | ಪಿಡಬ್ಲೂ - 06 |
| ತಂದೆಯ ಹೆಸರು | - ಹೊಸಬಯ್ಯು | ಸಿಡಬ್ಲೂ - 13 |
| ವಯಸ್ಸು | - 49 ವರ್ಷ | |
| ಉದ್ಯೋಗ | - ಪಿ.ಡಿ.ಒ. ಬಿ.ಕಣಬೂರು ಗ್ರಾಮ ಪಂಚಾಯ್ತಿ | |
| ವಾಸ ಸ್ಥಳ | - ಶೃಂಗೇರಿ | |

ದಿನಾಂಕಃ 13.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

1. ನಾನು ದಿಃ 01-04-2022 ರಿಂದ ದಿಃ 31-07-2023 ರವರೆಗೆ ಬಿ.ಕಣಬೂರು ಗ್ರಾಮ ಪಂಚಾಯಿತಿಯ ಪ್ರಭಾರೆ ಅಭಿವೃದ್ಧಿ

ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಈಗ ನಾನು ಸದರಿ ಪಂಚಾಯ್ತಿಯ ರೆಗ್ಯೂಲರ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 20-03-2023 ರಂದು ಎನ್.ಆರ್.ಪುರ ವೃತ್ತ ನಿರೀಕ್ಷಕರು ನನಗೆ ನೋಟೀಸ್ ನ್ನು ಕೊಟ್ಟು ಬಾಳೆಹೊನ್ನೂರು ಪೊಲೀಸ್ ಠಾಣೆ ಮೊಕದ್ದಮೆ ಸಂಃ 30/2023 ಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳದ ಬಗ್ಗೆ ದಾಖಲೆಯನ್ನು ನೀಡುವಂತೆ ಕೋರಿದ್ದರು. ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.32 ಎಂದು ಗುರುತಿಸಲಾಯಿತು. ಸದರಿ ನೋಟೀಸ್ ದಿಃ 21-03-2023 ರಂದು ನಮ್ಮ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

3. ಸದರಿ ನೋಟೀಸಿನ ಮೇರೆಗೆ ನಾನು ನಮ್ಮ ಕಛೇರಿಯಲ್ಲಿದ್ದ ಕಡತಗಳನ್ನು ಪರಿಶೀಲಿಸಲಾಗಿ ಶ್ರೀಮತಿ ಜಯ ಕೋಂ ರವಿರವರ ಹೆಸರಿನಲ್ಲಿ ಪಂಚಾಯ್ತಿಯಲ್ಲಿ ಯಾವುದೇ ದಾಖಲೆ ಇರುವುದಿಲ್ಲ ಬದಲಿಗೆ ಸದರಿ ಜಯ ಕೋಂ ರವಿರವರು ವಾಸವಾಗಿರುವ ಮನೆಯು ಅವರ ಮಾವನಾದ ನೀಲಯ್ಯ ಪೂಜಾರಿರವರ ಹೆಸರಿನಲ್ಲಿ ಇರುವುದು ಕಂಡುಬಂತು. ಆ ಬಗ್ಗೆ ನಾನು ನಮ್ಮ ಕಛೇರಿಯಲ್ಲಿದ್ದ ಅಸೆಸೆಮಂಟ್ ರಿಜಿಸ್ಟರನ ದೃಢೀಕೃತ ಪ್ರತಿಯನ್ನು ನನ್ನ ವರದಿಯೊಂದಿಗೆ ದಿಃ 03-05-2023 ರಂದು ಪೊಲೀಸರಿಗೆ ನೀಡಿದ್ದೇನೆ. ಸದರಿ ವರದಿ ಮತ್ತು ಅಸೆಸೆಮಂಟ್ ರಿಜಿಸ್ಟರನ ದೃಢೀಕೃತ ಪ್ರತಿಯನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ

ಮೇರೆಗೆ ಅವುಗಳನ್ನು ಕ್ರಮವಾಗಿ ನಿಪಿ.33 ಮತ್ತು ಪಿ.34 ಎಂದು ಅವುಗಳಲ್ಲಿರುವ ಸಹಿಗಳನ್ನು ನಿಪಿ.33(ಎ) ಮತ್ತು ಪಿ.34(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರಿಂದಃ-</u>

4. ನೀವು ನಿಪಿ.34 ರಲ್ಲಿ ತೋರಿಸಿರುವ ಸ್ವತ್ತಿಗೆ ಯಾರು ಕಂದಾಯವನ್ನು ಕಟ್ಟುತ್ತಿದ್ದರು ಎಂದು ತೋರಿಸಲು ಪೊಲೀಸರಿಗೆ ದಾಖಲೆಯನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀಲಯ್ಯ ಪೂಜಾರಿಯರವರು ಈಗ ಬದುಕಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಮೃತಪಟ್ಟ ವ್ಯಕ್ತಿಯ ಹೆಸರಿನಲ್ಲಿ ಖಾತೆ ಇದ್ದರೆ ಅವರ ಹೆಸರಿನಲ್ಲಿ ನೀವು ಕಂದಾಯವನ್ನು ಸ್ವೀಕರಿಸುವುದಿಲ್ಲ ಎಂದರೆ ಸಾಕ್ಷಿ ಯಾರು ಕಂದಾಯವನ್ನು ಕಟ್ಟುತ್ತಾರೋ ಅವರ ಹೆಸರಿನಲ್ಲಿ ಜಮಾ ಎಂದು ತೆಗೆದುಕೊಳ್ಳುತ್ತೇವೆ ಎನ್ನುತ್ತಾರೆ. ನೀಲಯ್ಯರವರು ಜಯ ಕೋಂ ರವಿರವರ ಮಾವ ಎಂದು ಹೇಳಲು ಅವರು ತಮ್ಮ ವಂಶವೃಕ್ಷವನ್ನು ಕೊಟ್ಟಿದ್ದರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

5. ನಿಪಿ.34 ರಲ್ಲಿ ಸ್ವತ್ತಿನ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ನಮೂದಿಸಲಾಗಿದೆ. ಪೊಲೀಸರು ಮನವಿಯನ್ನು ಸಲ್ಲಿಸಿದ ಬಳಿಕ ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ. ಪೊಲೀಸರ ಮಾತು ಕೇಳಿ

ಅವರಿಗೆ ಸಹಾಯ ಮಾಡಲು ನಿಪಿ.33 ಮತ್ತು ಪಿ.34 ರಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕೊಟ್ಟು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ